॥ ಶ್ರೀ ॥

# ಶ್ರೀ ತುಲಸೀ ಮಹಾತ್ಮೆ

**ಎಂ**ದಿನಂತೆ ತುಂಗಮ್ಮ ಮನೆಯ ಮುಂಭಾಗದಲ್ಲಿರುವ ತುಲಸೀಗಿಡವಿರುವ ವೃಂದಾವನ ಹಾಗೂ ತುಲಸಿ ಗಿಡಕ್ಕೆ ಪೂಜೆಮಾಡಿ ಒಳಬರಲು ಹಿಂತಿರುಗುತ್ತಿರುವಾಗ ಪಕ್ಕದ ಮನೆಯ ಸರಳ ಕಂಡಳು. ಇಬ್ಬರೂ ಎಂದಿನಂತೆ ಮುಗುಳುನಗೆಯ ವಿನಿಮಯ ಮಾಡಿಕೊಂಡರು.

ತುಂಗಮ್ಮ ಸುಮಾರು 54 – 55 ವರ್ಷದ ಮುತ್ತೈದೆ. ಯಜಮಾನರಿಗೆ ಕೆಲಸದಿಂದ ನಿವೃತ್ತಿಯಾದಮೇಲೆ ಸ್ವಂತ ಊರಾದ ಕನಕಪುರಕ್ಕೆ ಬಂದು ನೆಲೆಸಿದ್ದಾರೆ. ಸರಳ ಸುಮಾರು 34 – 35 ರ ಮಹಿಳೆ. ಮನೆಯಲ್ಲಿ ಅತ್ತೆ, ಮಾವ, ಗಂಡ, ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುತ್ತಿರುವ ಗೃಹಿಣಿ.

ಸಹಜವಾಗಿಯೇ ತುಂಗಮ್ಮ "ತುಲಸೀ ಪೂಜೆ ಆಯ್ತಾಮ್ಮಾ" ಎಂದು ಕೇಳಿದರು. ಸರಳ ಇಲ್ಲವೆಂದು ತಲೆಯಾಡಿಸುತ್ತಾ "ನಮ್ಮ ಮನೆಯಲ್ಲಿ ಆ ಸಂಪ್ರದಾಯವಿಲ್ಲ" ಎಂದಳು. ತುಂಗಮ್ಮ ಆಶ್ಚರ್ಯ ಚಕಿತರಾಗಿ ಎಲ್ಲೋ ತನಗೇ ಕಿವಿ ಸರಿಯಾಗಿ ಕೇಳಿಸಿರಲಾರದೆಂದು "ಏನೆಂದೆಯಮ್ಮಾ" ಎಂದರು. "ಅದೇ ನಮ್ಮ ಮನೆಯಲ್ಲಿ ತುಲಸೀ ಪೂಜೆ ಮಾಡುವ ಅಭ್ಯಾಸವಿಲ್ಲ" ಎಂದು ಸ್ಪಷ್ಟವಾಗಿ ಉತ್ತರಿಸಿದಳು ಸರಳಾ. ತಮ್ಮ ಪಂಗಡದವರೇ ಇವರು ಎಂದು ತಿಳಿದಿದ್ದ ತುಂಗಮ್ಮನಿಗೆ ಹಿಂದು ಮುಂದು ಏನೂ ಅರ್ಥವಾಗದೆ, ಮಾತನ್ನು ಆ ಸಧ್ಯದಲ್ಲಿ ಮುಂದುವರಿಸಲು ಇಷ್ಟಪಡದೆ, ಪುರುಸೊತ್ತು ಆದಾಗ ನಿಮ್ಮತ್ತೆಯನ್ನೂ ಕರೆದುಕೊಂಡು ಮನೆಗೆ ಬಾಮ್ಮ ಎಂದು ಸ್ನೇಹದಿಂದ ಕರೆದರು. ಅಷ್ಟೇ ಸ್ನೇಹಮಯಿಯಾದ ಸರಳಾ "ಆಗಲಿ" ಎಂದು ಒಪ್ಪಿಕೊಂಡಳು.

ಒಂದೆರಡು ದಿನಗಳಾದ ಮೇಲೆ ಸರಳಾ ಮತ್ತು ಅವರತ್ತೆ ಸೀತಮ್ಮ ತುಂಗಮ್ಮ ಅವರ ಮನೆಗೆ ಮಧ್ಯಾಹ್ನ ಬಂದರು. ತುಂಬು ಹೃದಯದಿಂದ ಸ್ವಾಗತಿಸಿದ ತುಂಗಮ್ಮ ಅವರನ್ನು ಕುಳ್ಳಿರಿಸಿದರು. ಉಭಯ ಕುಶಲೋಪರಿಯಾದ ಮೇಲೆ ಕಾಡುಹರಟೆ ಹೊಡಿಯಲು ಇಷ್ಟಪಡದ ತುಂಗಮ್ಮ ನೇರವಾಗಿ ವಿಷಯಕ್ಕೆ ಬಂದರು.

"ಅವತ್ತು ನೀನು ತುಲಸಿಪೂಜೆ ವಿಷಯವಾಗಿ ಹೇಳಿದ್ದನ್ನು ನನಗೆ ನಂಬಲು ಸಾಧ್ಯವೇ ಆಗುತ್ತಿಲ್ಲಮ್ಮ" ಎಂದರು. "ಹೌದು ಆಂಟೀ ಬೇಕಿದ್ದರೆ ನಮ್ಮತ್ತೆಯನ್ನು ಕೇಳಿ" ಎಂದಳು ಸರಳಾ. "ಹೌದು ಹೌದು ನಮ್ಮತ್ತೆಯೂ ಹಾಗೇ ಹೇಳುತ್ತಿದ್ದರು" ಎಂದರು ಹಿರಿ ಮುತ್ತೈದೆ ಸೀತಮ್ಮ. ಒಂದು ವೇಳೆ ಇವರು ನಾಸ್ತಿಕರೋ ಏನೋ, ನಾನು ತುಲಸೀ ಮಹಾತ್ಮೆ ಅದೂ ಇದೂ ಅಂತ ಹೇಳಿದರೆ ನೀರಲ್ಲಿ ಹೋಮ ಮಾಡಿದಂತಾಗುತ್ತದೆ ಎಂದು ಒಂದು ಕ್ಷಣ ಯೋಚಿಸಿದ ತುಂಗಮ್ಮ ಉಪಾಯವಾಗಿ "ನಿಮ್ಮ ಮನೆಯಲ್ಲಿ ದೇವರ ಮನೆ ಪ್ರತ್ಯೇಕವಾಗಿ ಇದೆಯೋ ಅಥವಾ .." ಎಂದರು. ಸೂಕ್ಷ್ಮಮತಿಯಾದ ಸರಳಾ "ಹೌದು ದೇವರ ಮನೆ ಪ್ರತ್ಯೇಕವಾಗಿದೆ. ನಮ್ಮ ಮಾವನವರು ಸಂಧ್ಯಾವಂದನೆ ಮಾಡಿ ಹೋದಮೇಲೆ ಅತ್ತೆಯವರು ದೇವರಮನೆಗೆ ಹೋಗಿ ದೇವರಿಗೆ ದೀಪಗಳನ್ನು ಹಚ್ಚಿ ಪಟಗಳಿಗೆ ಹೂ ಇಡುತ್ತಾರೆ" ಎಂದಳು. ಸಧ್ಯ ಎಂದು ಮನಸ್ಸಿನೊಳಗೇ ಸಮಾಧಾನ ಪಟ್ಟುಕೊಂಡರು ತುಂಗಮ್ಮ.

"ನೋಡಮ್ಮಾ, ಕೆಲವು ಸಂಪ್ರದಾಯಗಳು ಸರಿಯೋ ತಪ್ಪೋ ನಮ್ಮ ಕುಟುಂಬಗಳಲ್ಲಿ ಸೇರಿ ಹೋಗಿರುತ್ತದೆ. ಅದನ್ನು ಸರಿಯಾಗಿ ವಿಶ್ಲೇಷಿಸಿ ತಿದ್ದಿಕೊಳ್ಳಬೇಕಾದ್ದು ನಮ್ಮ ಕೆಲಸ. ನೀವು ತಪ್ಪು ತಿಳಿಯದಿದ್ದರೆ ತುಲಸೀ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ನಂತರ ನೀವು ಪೂಜೆ ಮಾಡುವುದು ಬಿಡುವುದು ನಿಮಗೆ ಸೇರಿದ್ದು" ಎಂದರು. ಅತ್ತೆ ಸೊಸೆ ಇಬ್ಬರೂ ಉತ್ಸಾಹದಿಂದ "ಖಂಡಿತಾ ಹೇಳಿ, ತಿಳಿಯುವ ಕುತೂಹಲ ನಮಗೆ ಇದೆ" ಎಂದರು.

ಹಿಂದೆ ಸಮುದ್ರ ಮಥನ ಸಮಯದಲ್ಲಿ ಧನ್ವಂತರಿ ರೂಪದಿಂದ ಹರಿಯು ಅಮೃತ ಕಲಶವನ್ನು ಹಿಡಿದು ಮೇಲೆ ಬಂದಾಗ ಹರಿಯ ಕಣ್ಣಿನಿಂದ ಕೆಲವು ಹನಿ ಆನಂದ ಭಾಷ್ಪಗಳು ಅಮೃತ ಕಲಶದಲ್ಲಿ ಉದುರಿ ಬಿದ್ದವು. ಆ ಕಣ್ಣೀರಿನಿಂದ ಜನಿಸಿದವಳೇ ತುಲಸೀ. ಆನಂದ ಭಾಷ್ಪದಿಂದ ಜನಿಸಿದವಳಾದ್ದರಿಂದ ಅವಳು ಆನಂದವನ್ನು ಕೊಡತಕ್ಕವಳು. ಶ್ರೀ ಲಕ್ಷ್ಮೀ ದೇವಿಯ ಅಂಶವನ್ನೂ ಹೊಂದಿದವಳು. ಆದ್ದರಿಂದಲೇ ಕಾರ್ತೀಕ ಶುದ್ದ ದ್ವಾದಶೀ ಕೃಷ್ಣ ಮತ್ತು ತುಲಸಿಯರಿಗೆ ವಿವಾಹ ಮಾಡುವುದು. ಹರಿಗೆ ಬಹು ಪ್ರೀತಿ ಪಾತ್ರಳು. ತುಲಸಿ ಇರುವಲ್ಲಿ ಹರಿಯು ಇರುತ್ತಾನೆಂದು ಪ್ರತೀತಿ.

ತುಲಸೀ ಕಾನನಂ ಯತ್ರ । ಯತ್ರ ಪದ್ಮವನಾನಿ ಚ ।
ವಸಂತಿ ವೈಷ್ಣವಾಃ ಯತ್ರ । ತತ್ರ ಸನ್ನಿಹಿತೋ ಹರಿಃ ॥

ತುಲಸೀ ತೋಟ, ಕಮಲದ ಹೂಗಳಿರುವ ಸರೋವರ, ಶುಧ್ಧ ವೈಷ್ಣವರು ಎಲ್ಲಿರುವರೋ ಅಲ್ಲಿ ಹರಿಯು ಇರುತ್ತಾನೆ. ತೋಟ ಎಂದ ಮಾತ್ರಕ್ಕೆ ಎಕರೆಗಟ್ಟಲೆ ಜಮೀನಿರುವ ತೋಟವೆಂದು ಅರ್ಥವಲ್ಲ. ಕಡೆಯ ಪಕ್ಷ ಮೂರು ಗಿಡಗಳಾದರೂ ಇರಬೇಕು.

ತುಲಸೀ ಧರ್ಮಧ್ವಜನೆಂಬ ರಾಜನಿಗೆ ಮಗಳಾಗಿ ಜನಿಸಿದಳು. ಲಕ್ಷ್ಮೀ ಅಂಶದಿಂದ ಯುಕ್ತಳಾದ, ಸೌಂದರ್ಯದ ಖನಿಯಾದ ಮಗಳನ್ನು ರಾಜನು ತುಲಸೀ ಎಂದು ಅನ್ವರ್ಥನಾಮದಿಂದ ಕರೆದನು. ತುಲ = ಸಮಾನ ಅಂದರೆ ಲಕ್ಷ್ಮೀಗೆ ಸಮನೆಂದು ಅರ್ಥ. ಆದರೆ, ಅವಳೇ ಲಕ್ಷ್ಮಿ ಎಂದು ಎಲ್ಲೂ ಹೇಳಿಲ್ಲ. ಸದಾ ಹರಿಯ ಸಂಗದಲ್ಲಿ ಇರಬೇಕೆಂಬ ಅವಳ ಇಷ್ಟವನ್ನು ಪೂರೈಸಲು ಅವಳನ್ನೇ ಮಾಲೆಯಾಗಿ ಹಾಕಿಕೊಂಡನು ವಿಷ್ಣು. "ಭಕ್ತರು ಅರ್ಪಿಸುವ ತುಲಸೀದಳ ಮೂಲಕ ನೀನು ನನ್ನ ಸಾಮೀಪ್ಯವನ್ನು ಪಡೆಯುವಿ" ಎಂಬ ವರವನ್ನು ಕೊಟ್ಟನು.

ಶ್ರೀ ಕೃಷ್ಣನ ಷಣ್ಮಹಿಷಿಯರಲ್ಲಿ ಜಾಂಬವತಿ ಶ್ರೇಷ್ಠಳು. ಲಕ್ಷ್ಮೀ ದೇವಿಯ ವಿಶೇಷ ಸನ್ನಿಧಾನ ಪಾತ್ರಳು. ಜಾಂಬವತಿಯೇ ತುಲಸೀರೂಪದಿಂದ ಹರಿಯ ನಿತ್ಯಸೇವೆ ಮಾಡುವಳೆಂದು (ತುಲಸೀ ಜಾಂಬವತೀ ಪ್ರೋಕ್ತಾ) ಎಂದು ಜ್ಞಾನಿಗಳು ಹೇಳುತ್ತಾರೆ. ''ಎಲ್ಲಾ ಸಾಧನವಿದ್ದು ತುಲಸೀ ಇಲ್ಲದ ಪೂಜೆ ಒಲ್ಲನೋ ಹರಿ ಕೊಳ್ಳನೋ'' ಎಂದು ಹಿರಿಯ ದಾಸರ ಪದವಿದೆ, ನೀವೂ ಕೇಳಿರಬಹುದು ಎಂದು ತುಂಗಮ್ಮ ಹೇಳಲು ಹೌದೆಂದು ತಲೆಯಾಡಿಸಿದರು ಅತ್ತೆ ಸೊಸೆ.

ಎಲ್ಲ ಋತುಗಳಲ್ಲಿಯೂ ಎಲ್ಲಾ ಪುಷ್ಪಗಳು ಸಿಗುವುದಿಲ್ಲ. ಆದರೆ ಎಲ್ಲಾ ಪುಷ್ಪಗಳ ಪರಿಮಳವೂ ಕೇಂದ್ರೀಕೃತಗೊಂಡಿರುವ (ಜ್ಞಾನಿಗಳ ಹೇಳಿಕೆ) ತುಲಸೀದಳ ಎಲ್ಲಾಕಾಲದಲ್ಲೂ ಲಭ್ಯ. ಆದ್ದರಿಂದ ತುಲಸೀದಳವನ್ನು ಹರಿಗೆ ಸಮರ್ಪಿಸಿದರೆ ಎಲ್ಲಾ ಶ್ರೇಷ್ಠವಾದ ಹೂಗಳನ್ನು ಅರ್ಪಿಸಿದ್ದಕ್ಕೆ ಸಮ.

ಬೆಳಿಗ್ಗೆ ಎದ್ದು ತುಲಸೀ ದರ್ಶನ ಮಾಡಿದರೆ ಸಕಲಪಾಪ ಪರಿಹಾರವಾಗುತ್ತದೆಯಂತೆ, ಯಾಕೆಂದರೆ:

ಯನ್ಮೂಲೇ ಸರ್ವತೀರ್ಥಾನಿ ಯನ್ಮಧ್ಯೇ ಸರ್ವದೇವತಾಃ ।
ಯದಗ್ರೇ ಸರ್ವವೇದಾಶ್ಚ ತುಲಸೀ ತ್ವಾಂ ನಮಾಮ್ಯಹಂ ॥

ತುಲಸೀಗಿಡದ ಮೂಲದಲ್ಲಿ ಸಕಲ ತೀರ್ಥಾಭಿಮಾನಿ ದೇವತೆಗಳು, ಮಧ್ಯದಲ್ಲಿ ಸಕಲದೇವತೆಗಳೂ, ತುದಿಯಲ್ಲಿ ಎಲ್ಲಾ ವೇದಗಳೂ ಸನ್ನಿಹಿತವಾಗಿವೆ. ಇಂತಹಾ ತುಲಸಿಯನ್ನು ನಮಸ್ಕರಿಸುತ್ತೇನೆ. ತುಲಸಿಯ ದರ್ಶನ ಲಾಭ ಹೀಗಿದೆ.

ಗೋ ಕೋಟಿದಾನ ಸದೃಶಂ ಫಲಮಾಪ್ನುವಂತಿ ॥

ಒಂದು ಕೋಟಿ ಗೋವುಗಳ ದಾನಫಲಕ್ಕೆ ಸಮ ತುಲಸಿಯದರ್ಶನ. ದರ್ಶನದಿಂದ ಸಮಸ್ತಪಾಪ ಪರಿಹಾರ, ಸ್ಪರ್ಷದಿಂದ ದೇಹಶುದ್ಧಿ, ನಮಸ್ಕಾರದಿಂದ ರೋಗನಾಶ, ನೀರೆರುಯುವುದಿಂದ ಯಮನ ಬಾಧೆ ಪರಿಹಾರ, ತುಲಸಿಯನ್ನು ಬೆಳಸುವುದರಿಂದ ಹರಿಭಕ್ತಿಯ ಜನನ, ಶ್ರೀ ಹರಿಗೆ ತುಲಸಿಯ ಸಮರ್ಪಣೆಯಿಂದ ಮೋಕ್ಷಪ್ರಾಪ್ತಿ. ಹೀಗಿರುವಾಗ ಅಂತಹಾ ತುಲಸಿಯನ್ನು ಭಕ್ತಿ ಪೂರ್ವಕವಾಗಿ ಪೂಜಿಸಿದರೆ ಏನು ಫಲವಿರಬಹುದು? ಇಹ ಪರ ಎರಡಕ್ಕೂ ಶುಭ. ತನ್ನನ್ನು ಪೂಜಿಸಿದವರಿಗೆ ಮೋಕ್ಷಪ್ರಾಪ್ತಿಯಾಗುವಂತೆ ಶ್ರೀಹರಿಯಲ್ಲಿ ಶಿಫಾರಸು ಮಾಡುತ್ತಾಳಂ! ''ಪೂಜಿಪರಿಗೆ ಪರಮ ಮಂಗಲದ ಪದವಿತ್ತು ಸಲಹುವಿ'' ಎಂದು ದಾಸರು ಹೇಳಿದ್ದಾರೆ.

ಪ್ರಾತಃಕಾಲದಲಿ ನಿತ್ಯವೂ ಮನೆಯ ಮುಂದೆ ಇರುವ ತುಲಸಿ ಬೃಂದಾವನ ದರ್ಶನಮಾಡಿ, ರಂಗೋಲಿ ಹಾಕಿ, ಮುಂದೆ ನೀರು ಹಾಕಿ

ತುಲಸೀ ಶ್ರೀ ಸಖೀ ಶುಭೇ ಪಾಪಹಾರಿಣಿ ಪುಣ್ಯದೇ ।
ನಮಸ್ತೇ ನಾರದನುತೆ ನಾರಾಯಣ ಮನಃ ಪ್ರಿಯೇ ॥

ಎಂದು ಹೇಳಿ (ಹೇ ತುಲಸೀ, ಲಕ್ಷ್ಮೀ ದೇವಿಯ ಮಿತ್ರಳೇ, ಮಂಗಳ ಸ್ವರೂಪಿಣಿ, ಪಾಪಪರಿಹಾರಕಳೇ, ಪುಣ್ಯವನ್ನು ದಯಪಾಲಿಸು, ನಾರದರಿಂದ ನಮಸ್ಕರಿಸಲ್ಪಡುವ ನಾರಾಯಣನ ಪ್ರಿಯಳೇ ನಿನಗೆ ನಮಸ್ಕರಿಸುತ್ತೇನೆ) ನೀರುಹಾಕಿ, ಅರಿಶಿನ, ಕುಂಕುಮ, ಹೂಗಳಿಂದ ಪೂಜಿಸಿ, ಹರಿಗೆ ಅರ್ಪಿತವಾದ ನೈವೇದ್ಯವನ್ನೇ ಸಮರ್ಪಿಸಬೇಕು. ಶ್ರೀಹರಿಯನ್ನು ಹೊಂದುವ ಅರ್ಹತೆಯುಳ್ಳವರು ಅಂದರೆ ಮುಕ್ತಿಯೋಗ್ಯರಿಗೇನೇ ತುಲಸೀದೇವಿಯ ದರ್ಶನ ಸ್ತೋತ್ರಾದಿಗಳಲ್ಲಿ ಆಸಕ್ತಿ, ಶ್ರದ್ಧೆಯುಂಟಾಗುತ್ತದೆಂದು ಹಿರಿಯರು ಹೇಳುತ್ತಾರೆ. ನೋಡಮ್ಮಾ ಇಷ್ಟು ವಿಷಯ ತುಲಸಿಗಿಡದ್ದು ಎಂದು ಮೌನಧರಿಸಿದರು ತುಂಗಮ್ಮ.

''ತುಲಸೀಗಿಡಕ್ಕೆ ಮಾತ್ರವೇ ವೃಂದಾವನ ಕಟ್ಟುವುದು ಏಕೆಂದು ಹೇಳಿ ಆಂಟಿ'' ಎಂದಳು ಸರಳಾ. ಹಾ ್ಞ! ಅದು ಮರತೇ ಹೋಗಿತ್ತು ನೋಡು, ಎಂದು ತಕ್ಷಣ ಜ್ಞಾಪಿಸಿಕೊಂಡು ಮುಂದುವರಿಸಿದರು:

ಜಲಂಧರನೆಂಬ ದಾನವನಿಗೆ ಪತಿವ್ರತೆಯಾದ ಹೆಂಡತಿ ಬೃಂದಾ. ಅವಳ ಪಾತಿವ್ರತ್ಯದ ಫಲದಿಂದ ಅವನು ಅವಧ್ಯತ್ವವನ್ನು ಪಡೆದು ಸಕಲ ದುಷ್ಕರ್ಮಗಳನ್ನೂ ಮಾಡುತ್ತಿದ್ದನು. ಶ್ರೀಹರಿಯು ಒಮ್ಮೆ ಅವಳ ಪತಿರೂಪದಲ್ಲಿ ಬಂದು ಅವಳಿಗೆ ಸಂಗವನ್ನಿತ್ತನು. ಇದರಿಂದ ಅವಳ ಪಾತಿವ್ರತ್ಯ ನಾಶವಾದರೂ ಕೃಷ್ಣನ ಅನುಗ್ರಹಕ್ಕೆ ಪಾತ್ರಳಾಗಿ ತುಲಸಿಗೆ ಮಂದಿರಳಾಗಿ ಭಕ್ತರಿಂದ ಪೂಜ್ಯಳಾದಳು. ನಿತ್ಯ ಸುಮಂಗಲಿಯಾದಳು. ಆದ್ದರಿಂದ ತುಲಸೀಕಟ್ಟೆಗೆ (ಬೃಂದಾವನವಿದ್ದರೆ ಬೃಂದಾವನ, ಇಲ್ಲದಿದ್ದರೆ ತುಲಸಿಯನ್ನು ಬೆಳಸುತ್ತಿರುವ ಕುಂಡ ಇತ್ಯಾದಿ) ಮೊದಲ ಪೂಜೆಗೈದು ನಂತರ ತುಲಸಿಗೆ ಪೂಜೆ. ಅಂದರೆ ಬರೀ ನೆಲದಲ್ಲಿ ಕಟ್ಟೆ ಇಲ್ಲದೆ ಇರುವ ತುಲಸಿ ಪೂಜೆ ಶ್ರೇಷ್ಠವಲ್ಲ. ಹಾಗಾಗಿ, ಬೃಂದೆಗೆ ಆಶ್ರಯವನ್ನಿತ್ತು ತನ್ನ ದ್ವಾರಾ ಅವಳಿಗೂ ಒಂದು ಸ್ಥಾನವನ್ನು ಕೊಟ್ಟಿರುವಳು ತುಲಸಿ.

ಮೊರಬ ಸಂತತಿಯ ಒಬ್ಬ ಅಧಿಕಾರಿಯ ಪತ್ನಿ ೧೨ ವರ್ಷ ಸಂತಾನ ಹೀನಳಾಗಿದ್ದಳು. ಶ್ರೀ ವಿಷ್ಣು ತೀರ್ಥರ ಅಪ್ಪಣೆಯಂತೆ ಬೇಸಿಗೆಯಲ್ಲಿ ಊರಾಚೆಇದ್ದ ತುಲಸೀಗಿಡಕ್ಕೆ ನೀರೆರದು ಪುತ್ರವತಿಯಾದಳು.

ತುಲಸಿ ಗಿಡದಲ್ಲಿ ಶ್ರೀತುಲಸಿ, ಕೃಷ್ಣತುಲಸಿ ಎಂದು ೨ ಪ್ರಬೇಧಗಳುಂಟು. ಕೃಷ್ಣತುಳಸಿ ಗಿಡದಲ್ಲಿ ಎಲೆ ಕಪ್ಪಗಿರುತ್ತದೆ. ಅದು ಬೃಂದಾವನದಲ್ಲಿ ನೆಟ್ಟು ಪೂಜಿಸಲು ಬಹಳ ಯೋಗ್ಯ. ಶ್ರೀತುಲಸಿ ಎಲೆ ಹಸಿರಾಗಿರುತ್ತದೆ. ಅದು ಹರಿ ಸಮರ್ಪಣೆಗೆ ಯೋಗ್ಯ. ಸ್ತ್ರೀಯರಿಗೆ ನೀರೆರದು ಪೂಜಿಸುವ ಅಧಿಕಾರವುಂಟೇ ಹೊರತು ದಳಗಳನ್ನು ಬಿಡಿಸುವ ಅಧಿಕಾರವಿಲ್ಲ. ತೆನೆ ಬೆಳೆಯದಂತೆ ಕುಡಿಗಳನ್ನೂ/ತೆನೆಗಳನ್ನೂ (ಪುರುಷರು) ಬಿಡಿಸುತ್ತಿದ್ದರೆ, ಗಿಡ ಸೊಂಪಾಗಿ ಹರಡಿಕೊಂಡು ಬೆಳೆಯುತ್ತದೆ. ಗಿಡಗಳನ್ನು ಬೀಜಗಳಿಂದಲೂ, ಸಸಿಗಳಿಂದಲೂ ಅಭಿವೃದ್ಧಿಗೊಳಿಸಬಹುದು. ಸಾಮಾನ್ಯವಾಗಿ ಈ ಗಿಡಕ್ಕೆ ರೋಗ ಬರುವುದಿಲ್ಲ. ಅತಿ ಚಳಿಯೂ ಅಲ್ಲದ ಅತಿ ಬಿಸಿಲೂ ಅಲ್ಲದ ಸಿಹಿನೀರ ಪೋಷಣೆಯಲ್ಲಿ ತುಲಸಿ ಕಣ್ತುಂಬುವುದು.

ಶುಕ್ರವಾರ, ಮಂಗಳವಾರ ಮತ್ತು ದ್ವಾದಶಿ ದಿನಗಳಲ್ಲಿ, ಸ್ನಾನದ ಮೊದಲು ಮತ್ತು ಊಟವಾದನಂತರ ದಳಗಳನ್ನು ಬಿಡಿಸುವುದು, ತೆನೆ/ಕುಡಿಗಳನ್ನು ಕತ್ತರಿಸುವುದು, ಸ್ಥಳಾಂತರಿಸುವುದು ವರ್ಜ್ಯ. ಆದರೆ, ಅಂದಂದಿನ ಪೂಜೆಗೆ ಬೇಕಾದ ತುಲಸೀ ದಳಗಳನ್ನು, ಅಂದಂದೇ (ದ್ವಾದಶಿ ವಿನಹ) ಬಿಡಿಸಿಕೊಳ್ಳಬಹುದು.

ನಾವು ಡೆಲ್ಲಿಯಲ್ಲಿರುವಾಗ ನಮ್ಮ ನೆರೆಹೊರೆಯಲ್ಲಿ ಬೇರೆ ಮತೀಯರು ಇರುತ್ತಿದ್ದರು (ಇಸ್ಲಾಂ, ಕ್ರಿಶ್ಚಿಯನ್). ಅವರ ಮನೆಯಲ್ಲಿ ತುಲಸಿ ಕಂಡು ಆಶ್ಚರ್ಯ ಚಕಿತಳಾಗಿ ನಿಮಗೇಕೆ? ಎಂದೆ. ಯಾಕೆ ಹಾಗೆ ಕೇಳುತ್ತೀರಿ? ಔಷಧಿಗಾಗಿ ಬೆಳೆಸುತ್ತೇವೆ ಎಂದರು. ನೋಡಿ ಸೀತಮ್ಮಾ, ನಮ್ಮ ತುಲಸಿ ರೋಗ ಪರಿಹಾರಕವೂ ಹೌದು, ಪಾಪ ಪರಿಹಾರಕವೂ ಹೌದು ಅಲ್ಲವೇ? ಎನ್ನಲು ಮೂಕ ವಿಸ್ಮಿತರಾದ ಸೀತಮ್ಮ ಕೇವಲ ತಲೆಮಾತ್ರ ತೂಗಿದರು.

ಅಷ್ಟಕ್ಕೇ ಬಿಡದ ತುಂಗಮ್ಮ ಇನ್ನೂ ಹೇಳಿದರು; ಆನೆಯಂತೆ ಬದುಕಿದ್ದಾಗಲೂ, ಸತ್ತನಂತರವೂ ಬೆಲೆ ಇದಕ್ಕೆ. ಒಣಗಿದ ಕಾಷ್ಠದಿಂದ ಮಣಿಮಾಡಿ ಸರ ಹಾಕಿಕೊಳ್ಳುತ್ತಾರೆ. ಹೋಮ ಹವನಗಳಲ್ಲಿ ಉಪಯೋಗಿಸುತ್ತಾರೆ. ಗಂಧೋದಕ (ಸಾಲಿಗ್ರಾಮದ ಅಭಿಷೇಕಕ್ಕೆ) ಮಾಡಲು ತೇಯುತ್ತಾರೆ. ಇನ್ನೊಂದು ನೋಡು ಸರಳಾ; ನಾವು ದೀಪ ಹಚ್ಚುವಾಗ ಒಂದು ದೀಪದಿಂದ ಇನ್ನೊಂದು ದೀಪ ಹಚ್ಚಲು ಎಣ್ಣೆ/ತುಪ್ಪದಲ್ಲಿ ಅದ್ದಿದ ಒಣಕಾಷ್ಟ ಉಪಯೋಗಿಸಿದರೆ, ಒಂದು ದೀಪಕ್ಕೆ 10 ದೀಪ ಹಚ್ಚಿದ್ದಕ್ಕೆ ಸಮವಂತೆ. ಮಂಗಳಾರತಿ ಬತ್ತಿ ಮಾಡಲು ತುಲಸಿ ತೆನೆಯ ಕಾಷ್ಠ ಉಪಯೋಗಿಸಿದರೆ ಶ್ರೇಷ್ಠಕ್ಕೆ ಶ್ರೇಷ್ಠ, ಬತ್ತಿ ನೇರವಾಗಿ, ಸುಲಭವಾಗಿ ಮಾಡಬಹುದು. ಸಾಕುಬಿಡಿ, ಮೊದಮೊದಲು ನಮ್ಮ ಮನೆಗೆ ಬಂದದ್ದಕ್ಕೆ ತಲೆನೋವೇ ಸಿಕ್ಕಿತು ಎಂದರು ತುಂಗಮ್ಮ. ಅಲ್ಲಿಯವರೆಗೆ ಇಹಲೋಕವನ್ನೇ ಮರೆತು ತುಂಗಮ್ಮನ ವಾಗ್ಝರಿಯಲ್ಲಿ ಮುಳುಗಿಹೋಗಿದ್ದ ಅತ್ತೆ ಸೊಸೆ ವಾಸ್ತವ್ಯಕ್ಕೆ ಬಂದರು.

ಒಳಗೆ ವಿಶ್ರಾಂತಿಪಡೆಯುತ್ತಾ ಹೊರಗಿನ ವಿದ್ಯಮಾನಗಳನ್ನು ಕೇಳಿಸಿಕೊಳ್ಳುತ್ತಿದ್ದ ತುಂಗಮ್ಮನ ಯಜಮಾನರು ರಾಘವೇಂದ್ರರಾಯರು ಹೊರಗೆ ಬಂದರು. ಅವರನ್ನು ಅತ್ತೆಸೊಸೆಗೆ ಪರಿಚಯಿಸಿದ ತುಂಗಮ್ಮ ಅವರವರನ್ನೇ ಮಾತಾಡಲು ಬಿಟ್ಟು ಎಲೆ ಅಡಿಕೆ ಜೋಡಿಸಲು ಹೋದರು.

ಏನು? ನನ್ನ ಹೆಂಡತಿ ನಿಮ್ಮ ಕಿವಿ ಕೊರೆದು ಬಿಟ್ಟಳೋ ಎಂದು ಕೇಳಿದರು ರಾಯರು. ಇಲ್ಲ, ಇಲ್ಲ, ನಮಗೆ ಒಂದು ಹೊಸ ವಿಷಯ ಪರಿಚಯ ಮಾಡಿಕೊಟ್ಟರು. ತುಲಸೀಗಿಡಕ್ಕೆ ಇಷ್ಟು ಕಥೆ, ಮಹಿಮೆ ಇದೆ ಅಂತಲೇ ಗೊತ್ತಿರಲಿಲ್ಲ. ಎಲ್ಲರೂ ಪೂಜೆ ಮಾಡಬಹುದಾ ಅಂಕಲ್ ಎಂದಳು ಸರಳಾ. ಮೂರೂ ವರ್ಣದವರೂ ಮಾಡಬಹುದು. ನಾಲ್ಕನೇ ವರ್ಣದವರು ಗಿಡವನ್ನು ಪೋಷಿಸಬಹುದು. ಅದೇ ಒಂದು ಪುಣ್ಯ ಸಾಧನೆ ಎಂದರು.

ಅಷ್ಟು ಹೊತ್ತಿಗೆ ಅಲ್ಲಿ ನೇತುಹಾಕಿದ್ದ ದಂಪತಿಗಳ ಫೋಟೋ ನೋಡಿ "ಇದು ನಿಮ್ಮ ಮಗಸೊಸೆಯಾ" ಎಂದರು ಸೀತಮ್ಮ. ಹೌದೆಂದ ರಾಯರು. ಅವರು ಅಮೆರಿಕಾದಲ್ಲಿದ್ದಾರೆ, ಸಂದರ್ಭೋಚಿತವಾಗಿ ಜ್ಞಾಪಕ ಬಂತು; "ನೋಡಿ ಅಲ್ಲಿ ಇಸ್ಕಾನ್ (ISKCON) ದೇವಸ್ಥಾನದಲ್ಲಿ ತುಲಸೀ ಸಸಿಗಳನ್ನು ಹವಾ ನಿಯಂತ್ರಿತ ಕೋಣೆಗಳಲ್ಲಿ ಬೆಳೆಸುತ್ತಾರಂತೆ. ಭಕ್ತರು ಕೇಳಿದರೆ ಉಚಿತವಾಗಿ ಕೊಟ್ಟು, 'ತವರು ಮನೆಯಲ್ಲಿ ಪ್ರೀತಿಯಿಂದ ಬೆಳೆದ ಮಗಳು ಇವಳು. ಇವಳನ್ನು ಚೆನ್ನಾಗಿ ನೋಡಿಕೊಳ್ಳಿ. ಚಳಿಗಾಲದಲ್ಲಿ ಕಾಪಾಡಲು ಕಷ್ಟವಾದರೆ ತವರು ಮನೆಗೇ ಕರೆದುಕೊಂಡು ಬನ್ನಿ ಅವಳನ್ನು' ಎಂದು ಹೇಳುತ್ತಾರಂತೆ. ಸ್ತ್ರೀಲಿಂಗದಲ್ಲೇ ತುಲಸಿಯನ್ನು ಕರೆಯುತ್ತಾರಂತೆ" ಎಂದರು. ನಮ್ಮ ತುಲಸಿ ಸಾಗರದಾಚೆಯೂ ಮೆರೆಯುತ್ತಿದ್ದಾಳೆ.

ಅಷ್ಟು ಹೊತ್ತಿಗೆ ಅರಿಶಿನ ಕುಂಕುಮ ತಾಂಬೂಲದೊಂದಿಗೆ ಬಂದ ತುಂಗಮ್ಮ ಆದರದಿಂದ ಅತ್ತೆಸೊಸೆಗೆ ಕೊಟ್ಟರು. ಬೀದಿಬಾಗಿಲವರೆಗೂ ಬೀಳ್ಕೊಡಲು ಬಂದ ದಂಪತಿಗಳನ್ನು ಕುರಿತು ಸರಳಾ "ದಿನಾ ತುಲಸಿ ಬೃಂದಾವನಕ್ಕೆ ರಂಗೋಲಿ ಹಾಕ್ತೀರಾ ಆಂಟಿ?" ಎಂದಳು. ನೋಡು, ನೀನು ಕೇಳುವ ಪ್ರಶ್ನೆಗಳಿಂದಲೇ ನನಗೆ ಉತ್ಸಾಹ ಬರುತ್ತೆ ಎಂದು ಅಭಿಮಾನದ ನೋಟಬೀರಿ ಹೇಳಿದರು; "ಹನುಮಂತ ಲಂಕೆಯಲ್ಲಿ ಸೀತೆಯನ್ನು ಹುಡುಕುವಾಗ ಒಂದು ಮನೆಯ ಮುಂದೆ ತುಲಸಿ ಬೃಂದಾವನ, ಶಂಖ, ಚಕ್ರ, ಪದ್ಮ ರಂಗೋಲಿ ನೋಡಿ ಯಾರೋ ವೈಷ್ಣವರ ಮನೆ ಎಂದು ಆಶ್ಚರ್ಯ ಪಟ್ಟನಂತೆ. ಲಂಕೆ ಸುಡುವಾಗ ಆ ಮನೆಗೆ ಮಾತ್ರ ಬೆಂಕಿ ಬೀಳದ ಹಾಗೆ ನೋಡಿಕೊಂಡನಂತೆ. ಹೇಳು ಅದು ಯಾರ ಮನೆ?"

ಸರಳಾ, ಸ್ವಲ್ಪ ಅನುಮಾನಿಸುತ್ತಲೇ ವಿಭೀಷಣನ ಮನೆ ಇರಬೇಕೆಂದಳು. ತುಂಗಮ್ಮ "ಸರಿಯಾಗಿ ಹೇಳಿದೆ" ಎಂದು ಅವಳನ್ನು ಪ್ರೋತ್ಸಾಹಿಸಿ, ಮನೆಯ ಮುಂದೆ ತುಲಸಿ, ಬೃಂದಾವನ, ಶಂಖ, ಚಕ್ರದ ಚಿಹ್ನೆ ಇದ್ದರೆ ದುಷ್ಟ ಶಕ್ತಿಗಳು ತಾವಾಗೇ ಹಿಂದೆ ಹೋಗುತ್ತವೆಂದು ಇದರ ಅರ್ಥ ಎಂದರು.

ಏನೇನು ಚಿತ್ರ ಹಾಕಬೇಕೆಂದು ಕೇಳಿದ ಸೀತಮ್ಮನಿಗೆ ನಮಗಿರುವ ಸಮಯದ ಮಿತಿಗೆ ಅನುಸರಿಸಿ ಹಾಕಬಹುದು. ಶಂಖ, ಚಕ್ರ, ಪದ್ಮ ಮುಖ್ಯ ಎಂದರು ತುಂಗಮ್ಮ. "ಏನೇನೋ ಬಣ್ಣ ಹಾಕಿದ್ದೀರಲ್ಲ?" ಎಂದರು ಸೀತಮ್ಮ. ಸ್ವಲ್ಪ ನಾಚಿಕೊಂಡಂತೆ ತುಂಗಮ್ಮ ಹೇಳಿದರು; "ನಾನೀಗ ವಿಶ್ರಾಂತಿ ವೇಳೆಯಲ್ಲಿದ್ದೇನೆ, ನನ್ನ ಕರ್ತವ್ಯಗಳನ್ನೆಲ್ಲಾ ಒಂದು ವಿಧದಲ್ಲಿ ಮುಗಿಸಿದ್ದೇನೆ. ಇರುವ ಸಮಯವನ್ನು ಹೀಗೇ ... ಕಳೆಯುತ್ತೇನೆ. ಅದಕ್ಕೇ ನಾನೇ ಬಣ್ಣಗಳನ್ನು ಮಾಡಿಕೊಂಡಿದ್ದೇನೆ". "ಹೇಗೆ?" ಎಂದಳು ಸರಳ ಕುತೂಹಲ ತಡೆಯದೆ. "ಹಳದಿಗೆ ಅರಶಿನ, ಕೆಂಪಿಗೆ ಅರಶಿನ + ಸುಣ್ಣ, ಹಸಿರಿಗೆ ಅಗಸೆಸೊಪ್ಪಿನ ಪುಡಿ, ಕಪ್ಪಿಗೆ ನಲ್ಲಿಕಾಯಿ ಬೀಜದ ಪುಡಿ ಅಷ್ಟೆ" ಎಂದರು ತುಂಗಮ್ಮ.

ಅರೆ! ಬೃಂದಾವನದ ಒಳಗೇನು ಪ್ರತಿಮೆ! ಉದ್ಗರಿಸಿದ್ದು ಈ ಸಲ ಸೀತಮ್ಮ. "ಕೃಷ್ಣನಿಲ್ಲದೆ ತುಲಸಿಯೇ? ಅದಕ್ಕೇ ಒಂದು ಕೃಷ್ಣನ ಪ್ರತಿಮೆಯನ್ನೂ ಇಟ್ಟಿದ್ದೇನೆ" ಎಂದರು ತುಂಗಮ್ಮ.

ತುಂಗಮ್ಮ ದಂಪತಿಗಳು ಮನಸ್ಸಿನಲ್ಲೇ ಅಂದುಕೊಂಡರು; ಬಹುಶಃ, ಈ ಅತ್ತೆಸೊಸೆ ಇನ್ನು ಮೇಲೆ ನಮ್ಮ ಮನೆಕಡೆಗೆ ತಲೆ ಇಟ್ಟುಕೊಂಡೂ ಮಲಗುವುದಿಲ್ಲ, ಈ ರೀತಿ ತಲೆ ಕೊರೆಸಿಕೊಳ್ಳಲು ಯಾರಿಗೆ ಇಷ್ಟ?

ಆಶ್ಚರ್ಯವೆಂಬಂತೆ ಅತ್ತೆಸೊಸೆ ಇಬ್ಬರೂ ಒಟ್ಟಿಗೆ "ನಮಗೊಂದು ತುಲಸಿ ಸಸಿ ಕೊಟ್ಟು ಉಪಕರಿಸಿಯಮ್ಮ" ಎಂದರು. ನನ್ನ ಒಂದು ಘಂಟೆ ಉಪನ್ಯಾಸಕ್ಕೆ ಇಷ್ಟು ಬೆಲೆಯೇ? ಜೈ ತುಲಸಿ ಮಾತಾ ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತಾ, ಇಂದು ಬೇಡ, ನಾಳೆ ಬುಧವಾರ ಊಟಕ್ಕೆ ಮುಂಚೆ ನಾನೇ ನಿಮಗೆ ದಕ್ಷಣೆ ಸಹಿತ ದಾನಕೊಡುತ್ತೇನೆ ಎಂದು ನಗು ನಗುತ್ತಾ ಬೀಳ್ಕೊಟ್ಟರು ತುಂಗಮ್ಮ. ಧನ್ಯತೆಯ ಮುಖಹೊತ್ತ ಅತ್ತೆಸೊಸೆ ಸಧ್ಯ ಒಳ್ಳೆ ನೆರೆ ಸಿಕ್ಕಿತು ಎಂದು ಹರ್ಷಿಸಿದರು.

ಆಧಾರ: ಶ್ರೀ ಜಗನ್ನಾಥ ದಾಸರ "ತತ್ವಸುವ್ವಾಲಿ"

ತಮ್ಮ ಅನಿಸಿಕೆಗಳನ್ನು  ಇಮೈಲ್ ಮುಖಾಂತರ ಕಳುಹಿಸಿ: snrao@qualitysystems.co.in